ಓ ಎಸ್ ನಂಃ 487/2022
ಪಿಡಬ್ಲ್ಯೂ.1 (ಯಲ್ಲಪ್ಪ)

ದಿನಾಂಕ:06-12-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ ಕೆ ಡಿ ವಕೀಲರಿಂದಃ

1. ನನ್ನ ಮತ್ತು ಪ್ರತಿವಾದಿ 1 ಮತ್ತು 2 ರವರ ನಡುವೆ ನಡೆದ ಕ್ರಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರತಿವಾದಿ 1 ಮತ್ತು 2 ರವರು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ಪ್ರತಿವಾದಿ 1 ಮತ್ತು 2 ರವರು ಸಹಿಯನ್ನು ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ 1 ಎ ಮತ್ತು ಬಿ ಎಂದು ಗುರುತಿಸಲಾಯಿತು.

2. ನಿಪಿ 1 ಕ್ಕೆ ಸಾಕ್ಷಿಗಳಾಗಿ ಪಿ ಎಂ ರಾಮಣ್ಣ ಮತ್ತು ತಮ್ಮಣ್ಣ ದಾಸನಾಳರವರು ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ 1 ಸಿ ಮತ್ತು ಡಿ ಎಂದು ಗುರುತಿಸಲಾಯಿತು. ನಿಪಿ 1 ನ್ನು ಬಿ ಡಿ ಶಿರಸಂಗಿ ರವರು ಬರೆದಿದ್ದು. ಸದರಿಯವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ 1 ಇ ಎಂದು ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಸಾಕ್ಷಿಯು ತನ್ನ ಹಾಗೂ ಪ್ರತಿವಾದಿ 1 ಮತ್ತು 2 ರವರ ಪೊಟೋಗಳನ್ನು ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪೋಟೋಗಳನ್ನು ನಿಪಿ 1 ಎಫ್ ಯಿಂದ ಎಚ್ ಎಂದು ಗುರುತಿಸಲಾಯಿತು.

3. ದಾವಾ ಆಸ್ತಿಗೆ ಸಂಬಂಧಿಸಿದಂತೆ 3 ಆರ್ ಟಿ ಸಿ ಎಕ್ಸಟ್ರ್ಯಾಕ್ಟಗಳನ್ನು ಹಾಜರು ಮಾಡಿದ್ದು ನಿಪಿ 2 ರಿಂದ 4 ಎಂದು ಗುರುತಿಸಲಾಯಿತು.

4. ಪ್ರತಿವಾದಿ 1 ಮತ್ತು 2 ರವರಿಗೆ ನೀಡಿರುವ ನೋಟಿಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿಪಿ 5 ಎಂದು ಗುರುತಿಸಲಾಯಿತು.

5. 2 ಅಂಚೆ ರಶೀದಿಗಳನ್ನು ಹಾಜರು ಮಾಡಿದ್ದು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು.

6. 2 ಅಂಚೆ ಸ್ವೀಕೃತಿಗಳನ್ನು ಹಾಜರು ಮಾಡಿದ್ದು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು. ವಾದ ಪತ್ರದಲ್ಲಿ ಕೇಳಿಕೊಂಡಂತೆ ದಾವಾ ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ

ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು, ಸಮಯವನ್ನು ಕೋರಿರುತ್ತಾರೆ. ತಕರಾರು ಸಲ್ಲಿಸದ ಕಾರಣ ಪಾಟೀ ಸವಾಲಿಗಾಗಿ ಕೋರಿದ ಸಮಯವನ್ನು ನಿರಾಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ